

# ಜಯಮ್ಮನ ಮಗನ ಭಾವೋತ್ಕರ್ಷ!

'ಜಯಮ್ಮನ ಮಗ' ಚಿತ್ರದ ವಿಶೇಷಗಳೇನು?

'ಚಿತ್ರದಲ್ಲಿ ನಾನು ಎಂಟು ವಿಶಿಷ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದೇನೆ. ಅವುಗಳಲ್ಲಿ ಕಾಳಿಕಾ ದೇವಿಯ ಪಾತ್ರವೂ ಒಂದು. ತಾಯಿ ಮಗನ ಸೆಂಟಿಮೆಂಟಿನ ಜೊತೆಗೆ ಹಾಸ್ಯ ಹಾಗೂ ಸಾಹಸ ದೃಶ್ಯಗಳು ಚಿತ್ರದಲ್ಲಿ ಸಾಕಷ್ಟಿವೆ...'– ತಮ್ಮ ಚೊಚ್ಚಲ ನಿರ್ಮಾಣದ 'ಜಯಮ್ಮನ ಮಗ' ಚಿತ್ರದ ಬಗ್ಗೆ ಎಷ್ಟು ಮಾತನಾಡಿದರೂ ವಿಜಯ್‌ಗೆ ದಣಿವೆಂಬುದಿಲ್ಲ. ಸದ್ಯದಲ್ಲೇ ಹಾಡುಗಳ ಧ್ವನಿಮುದ್ರಿಕೆ ಬಿಡುಗಡೆ ಆಗಲಿದ್ದು, ಆಗಸ್ಟ್ ಕೊನೆಯಲ್ಲಿ ಅಥವಾ ಸೆಪ್ಟೆಂಬರ್ ಆರಂಭದಲ್ಲಿ ಚಿತ್ರವನ್ನು ತೆರೆ ಕಾಣಿಸಲು ವಿಜಯ್ ಪ್ರಯತ್ನಿಸುತ್ತಿದ್ದಾರೆ.

ವಿಜಯ್ ಸಿನಿಮಾ ಎಂದರೆ ಸಾಹಸ ಪ್ರಿಯರಿಗೆ ಹಬ್ಬ ಇದ್ದಂತೆ. ಈ ಚಿತ್ರದಲ್ಲಿ ಮೈ ನವಿರೇಳಿಸುವ ದೃಶ್ಯಗಳು ಸಾಕಷ್ಟಿವೆಯಂತೆ. ಆದರೆ, ಅಷ್ಟೇ ಪರಿಣಾಮಕಾರಿಯಾದ ಭಾವುಕ ಸನ್ನಿವೇಶಗಳೂ ಚಿತ್ರದಲ್ಲಿವೆ. 'ಇದು ನನ್ನ ತಾಯಿಗಾಗಿ ನಿರ್ಮಿಸಿರುವ ಸಿನಿಮಾ. ಈ ಸಿನಿಮಾವನ್ನು ಎಲ್ಲ ಹೆಣ್ಣುಮಕ್ಕಳು ನೋಡಲೇಬೇಕು' ಎಂದು ವಿಜಯ್ ಭಾವುಕರಾಗಿ ಹೇಳುತ್ತಾರೆ.

ಅರ್ಜುನ್ ಜನ್ಯ 'ಜಯಮ್ಮನ ಮಗ'ನಿಗೆ ಸಂಗೀತ ನೀಡಿದ್ದಾರೆ. ಭಾರತಿ ಚಿತ್ರದ ನಾಯಕಿ. ಕಲ್ಯಾಣಿ ಮತ್ತು ರಂಗಾಯಣ ರಘು ತಾರಾಗಣದಲ್ಲಿರುವ ಪ್ರಮುಖರು.



# ಮಳೆ ಬರುವ ಹಾಗಿದೆ...

ನಟ ಪ್ರೇಮ್ ಅವರ ಪಾಲಿಗಿದು ತಂಪು ತಂಪು ಮಳೆಗಾಲ. 'ನೆನಪಿರಲಿ' ಚಿತ್ರದ ಭರ್ಜರಿ ಯಶಸ್ಸಿನಿಂದ ಬೆಳ್ಳಿತೆರೆಗೆ ಪ್ರವೇಶ ಪಡೆದ ಅವರಿಗೆ ನಂತರದ ದಿನಗಳಲ್ಲಿ ದೊಡ್ಡ ಗೆಲುವು ಮರೀಚಿಕೆಯಾಗಿಯೇ ಉಳಿಯಿತು. ಬಹು ನಿರೀಕ್ಷಿತ 'ಚಂದ್ರ' ಚಿತ್ರದ ಮೂಲಕ ವಿವಾದಗಳು ಬೆನ್ನೇರಿದವೇ ಹೊರತು, ಗೆಲುವಿನ ಸಿಹಿ ಸಿಗಲಿಲ್ಲ. ಆ ಕಹಿಯನ್ನೆಲ್ಲ ಮರೆತು ಪ್ರೇಮ್ ಅವರೀಗ 'ಮಳೆ'ಯಲ್ಲಿ ತೋಯಲು ಸಿದ್ಧರಾಗಿದ್ದಾರೆ.

ಕಳೆದ ವಾರ ಸೆಟ್ಟೇರಿದ 'ಮಳೆ', ನಿರ್ದೇಶಕ ಆರ್. ಚಂದ್ರು ನಿರ್ಮಿಸುತ್ತಿರುವ ಸಿನಿಮಾ. ಹಾಂ, ಈ ಸಿನಿಮಾದಲ್ಲಿ ಚಂದ್ರು ಅವರ ಪಾತ್ರ ನಿರ್ಮಾಣದ ಜವಾಬ್ದಾರಿಗಷ್ಟೇ ಸೀಮಿತ. ತಮ್ಮ ಗರಡಿಯಲ್ಲಿ ಪಳಗಿದ ತೇಜಸ್ ಅವರನ್ನು 'ಮಳೆ' ಮೂಲಕ ಚಂದ್ರು ನಿರ್ದೇಶಕರಾಗಿಸುತ್ತಿದ್ದಾರೆ. 'ನಾನು ಚಿತ್ರರಂಗಕ್ಕೆ ಬಂದಾಗ ಜೇಬಿನಲ್ಲಿ 50 ರೂಪಾಯಿ ಇತ್ತು. ಪ್ರಸ್ತುತ ಸಿನಿಮಾ ನಿರ್ಮಿಸುವ ಹಂತಕ್ಕೆ ಬೆಳೆದಿದ್ದೇನೆ. ನನ್ನ ಜೊತೆಯಲ್ಲಿ ಇರುವವರು ಕೂಡ ನನ್ನ ಎತ್ತರಕ್ಕೆ ಬರಬೇಕು' ಎಂದು ತಮ್ಮ ಸಿನಿಮಾ ನಿರ್ಮಾಣದ ಉದ್ದೇಶವನ್ನು ಚಂದ್ರು ವಿವರಿಸುತ್ತಾರೆ.

ಮತ್ತೆ ಪ್ರೇಮ್ ವಿಷಯಕ್ಕೆ ಬರೋಣ. ಈವರೆಗೆ 'ಲವ್ಲಿ ಸ್ಟಾರ್' ಆಗಿದ್ದ ಅವರು 'ಮಳೆ'ಯ ಮೂಲಕ 'ಸ್ಟೈಲಿಷ್ ಸ್ಟಾರ್' ಆಗುತ್ತಿದ್ದಾರೆ. ಈ ಸಿನಿಮಾದ ವಿಶೇಷ ಪಾತ್ರಕ್ಕಾಗಿ ಅವರು ದೇಹವನ್ನು ಹುರಿಗಟ್ಟಿಸುತ್ತಿದ್ದಾರೆ. ಮಳೆಯಲ್ಲಿ ನೆನೆಯುವ ದೇಹ ಕಟ್ಟುಮಸ್ತಾಗಿರುವುದು ಬೇಡವೇ?

'ಮಳೆ' ಚಿತ್ರದ ಅಡಿಬರಹ– 'ಇದು ಬಿಸಿಲಿನ ಕಥೆ'. ಅಲ್ಲಿಗೆ ಚಿತ್ರದ ಶೀರ್ಷಿಕೆ ಮತ್ತು ಅಡಿ ಟಿಪ್ಪಣಿಯ ಹಿನ್ನೆಲೆಯಲ್ಲಿ, ಚಿತ್ರದಲ್ಲಿ ನೀರಿನ ಆರ್ದ್ರತೆಯ ಮಳೆಯ ಜೊತೆಗೆ ಬೆಂಕಿಯ ಮಳೆಯೂ ಸುರಿಯಲಿದೆ ಎಂದಾಯಿತು.

■ ರಘು